# ಪತ್ರಿಕಾ ಪ್ರಕಟಣೆ

**ಶಿಕ್ಷಣ ಸಚಿವಾಲಯವು ದಿನಾಂಕ 30 ಸೆಪ್ಟೆಂಬರ್ ಮತ್ತು 1 ಅಕ್ಟೋಬರ್ 2023 ರಂದು ಭಾರತೀಯ ಭಾಷಾ ಉತ್ಸವದ ಶುಭಾರಂಭ ಮತ್ತು "ತಂತ್ರಜ್ಞಾನ ಮತ್ತು ಭಾರತೀಯ ಭಾಷೆಗಳು" ಎಂಬ ವಿಷಯ ಕುರಿತಂತೆ ಎರಡು ದಿನಗಳ ಶೃಂಗಸಭೆಯನ್ನು ಆಯೋಜಿಸಲಿದೆ.**

ದಿನಾಂಕ 28 ಸೆಪ್ಟೆಂಬರ್ 2023 ರಿಂದ ಪ್ರಾರಂಭವಾಗಲಿರುವ 72 ದಿನಗಳ ಭಾರತೀಯ ಭಾಷಾ ಉತ್ಸವದ ಅಂಗವಾಗಿ ಶಿಕ್ಷಣ ಸಚಿವಾಲಯವು **ಭಾರತೀಯ ಭಾಷಾ ಉತ್ಸವದ** ಶುಭಾರಂಭ ಮಾಡಲಿದೆ ಹಾಗೂ 30 ಸೆಪ್ಟೆಂಬರ್ ಮತ್ತು 1 ಅಕ್ಟೋಬರ್ 2023 ರಂದು **"ತಂತ್ರಜ್ಞಾನ ಮತ್ತು ಭಾರತೀಯ ಭಾಷೆಗಳು"** ಎಂಬ ವಿಷಯ ಕುರಿತಂತೆ ಎರಡು ದಿನಗಳ ಶೃಂಗಸಭೆಯನ್ನು ಆಯೋಜಿಸಲಿದೆ. ಭಾರತೀಯ ಭಾಷಾ ಉತ್ಸವದ ಅಂಗವಾಗಿ ಗೌರವಾನ್ವಿತ ಕೇಂದ್ರ ಶಿಕ್ಷಣ ಸಚಿವರಾದ ಶ್ರೀ ಧರ್ಮೇಂದ್ರ ಪ್ರಧಾನ್ ರವರು ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಇಂಟರ್ನ್ಯಾಷನಲ್ ಸೆಂಟರ್, ಡಾ. ರಾಜೇಂದ್ರ ಪ್ರಸಾದ್ ರಸ್ತೆ, ನವದೆಹಲಿ, ಇಲ್ಲಿ ಶೃಂಗಸಭೆಯನ್ನು ಉದ್ಘಾಟಿಸಲಿದ್ದಾರೆ. ಕಾಂಚೀಪುರಂನ ಐಐಐಟಿ-ಡಿಎಮ್ ನ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಜೊಹೊ ಕಾರ್ಪೊರೇಶನ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ (ಸಿಇಒ) ಶ್ರೀ ಶ್ರೀಧರ್ ವೆಂಬು ರವರು ಪ್ರಧಾನ ಭಾಷಣವನ್ನು ಮಾಡಲಿದ್ದಾರೆ.

ಶೃಂಗಸಭೆಯು ಮೂರು ವಿಷಯಾಧಾರಿತ ಗೋಷ್ಠಿಗಳನ್ನು ಹೊಂದಿರಲಿದೆ, ಅವುಗಳೆಂದರೆ- (i) ಭಾರತೀಯ ಭಾಷೆಗಳಿಗಾಗಿ ತಂತ್ರಜ್ಞಾನ, (ii) ಭಾರತೀಯ ಭಾಷೆಗಳಲ್ಲಿ ತಂತ್ರಜ್ಞಾನ, ಮತ್ತು (iii) ಭಾರತೀಯ ಭಾಷೆಗಳ ಮೂಲಕ ತಂತ್ರಜ್ಞಾನ. ಈ ವಿಷಯಾಧಾರಿತ ಅಂಶಗಳು ಕಲಿಕೆ, ಸೇವಾಪೂರ್ವ ಮತ್ತು ಸೇವಾನಿರತ ಶಿಕ್ಷಕರಿಗೆ ತರಬೇತಿ, ಪಠ್ಯಪುಸ್ತಕ ಲೇಖಕರು, ಪರೀಕ್ಷಕರು ಮತ್ತು ತಜ್ಞರು ಸೇರಿದಂತೆ, ಬೋಧನಾ ಕ್ಷೇತ್ರಗಳಲ್ಲಿ ಭಾರತೀಯ ಭಾಷಾ ತಂತ್ರಜ್ಞಾನದ ಬಳಕೆ ಮಾಡಿಕೊಳ್ಳುವ ಹಾಗೂ ಕ್ರೆಡಿಟ್‌ಗಳನ್ನು ನೀಡುವ ಮೂಲಕ, ಬೋಧನೆ-ಕಲಿಕೆ ಸಾಮಗ್ರಿಗಳ ಅನುವಾದಗಳ ಮೂಲಕ ಭಾರತೀಯ ಭಾಷಾ ಜ್ಞಾನ ಮತ್ತು ಪ್ರಾವೀಣ್ಯತೆಯನ್ನು ಪರೀಕ್ಷಿಸುವ ಹಾಗೂ ಅಂತಿಮವಾಗಿ, ರಾಷ್ಟ್ರೀಯ ಶಿಕ್ಷಣ ನೀತಿ-2020 ರನ್ವಯ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಿಂದ, ಭಾರತೀಯ ಭಾಷಾ ಶಿಕ್ಷಣ ವ್ಯವಸ್ಥೆಗೆ ಸುಗಮವಾಗಿ ಪರಿವರ್ತನೆ ಹೊಂದುವುದನ್ನು ಖಚಿತಪಡಿಸಿಕೊಳ್ಳುವ ಗುರಿ ಹೊಂದಿವೆ.

ಈ ಎರಡು ದಿನಗಳ ಶೃಂಗಸಭೆಯಲ್ಲಿ ಶಿಕ್ಷಣ ಕ್ಷೇತ್ರದ ಎಲ್ಲಾ ಪಾಲುದಾರರು ಭಾರತೀಯ ಭಾಷೆಗಳಲ್ಲಿ ಶಿಕ್ಷಣದ ದೃಷ್ಟಿಕೋನಗಳನ್ನು ಅನುಷ್ಠಾನಗೊಳಿಸಿ ಅವುಗಳನ್ನು ಸಾಕಾರಗೊಳಿಸುವ ಕುರಿತಂತೆ ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗುತ್ತದೆ. ಈ ಶೃಂಗಸಭೆಯಲ್ಲಿ ವಿವಿಧ ವೃತ್ತಿಗಳು ಮತ್ತು ಕ್ಷೇತ್ರಗಳ, ಅಂದರೆ ಶೈಕ್ಷಣಿಕ ಕ್ಷೇತ್ರ, ವಿದ್ಯಾರ್ಥಿಗಳು, ಸಂಶೋಧನಾ ವಿದ್ವಾಂಸರು, ಎಜುಟೆಕ್ ಮತ್ತು ಇನ್ಫೋಟೆಕ್ ಉದ್ಯಮ, ತಾಂತ್ರಿಕ ತಜ್ಞರು, ಮಾಧ್ಯಮ ಮತ್ತು ಫ್ರೀಲಾನ್ಸ್ ಉದ್ಯೋಗಿಗಳು ಸೇರಿದಂತೆ ಸುಮಾರು 1000 ಜನ ಭಾಗವಹಿಸುವ ನಿರೀಕ್ಷೆಯಿದೆ. ಈ ಶೃಂಗಸಭೆಯನ್ನು ಶಿಕ್ಷಣ ಸಚಿವಾಲಯ (ಎಮ್.ಒ.ಈ.) ಹಾಗೂ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ(ಎಮ್.ಎಸ್.ಡಿ.ಈ.)ಗಳು ತಮ್ಮ ಅಧೀನ ಸಂಸ್ಥೆಗಳಾದ ಭಾರತೀಯ ಭಾಷಾ ಸಂಸ್ಥಾನ (ಸಿ.ಐ.ಐ.ಎಲ್.) ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯು.ಜಿ.ಸಿ.), ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಮಿತಿ (ಎನ್.ಸಿ.ಈ.ಆರ್.ಟಿ.), ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆ (ಎನ್.ಇ.ಟಿ.ಎಫ್.), ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು (ಎ.ಐ.ಸಿ.ಟಿ.ಈ.), ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕೇಂದ್ರ (ಎನ್.ಸಿ.ವಿ.ಟಿ.ಈ.), ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪರಿಷತ್ತು (ಎನ್.ಸಿ.ಟಿ.ಈ.), ಭಾರತೀಯ ಭಾಷಾ ಸಮಿತಿ (ಬಿ.ಬಿ.ಎಸ್.), ಇತ್ಯಾದಿಗಳೊಂದಿಗೆ ಆಯೋಜಿಸುತ್ತಿವೆ. ಇದಕ್ಕೆ ಸಂಬಂಧಿಸಿದ ವಿವರಗಳು ಶೃಂಗಸಭೆಯ ವೆಬ್‌ಸೈಟಿನಲ್ಲಿ ಲಭ್ಯವಿವೆ: https://technology-bharatiyabhasha.aicte- india.org